<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 176/2015 ಸಿಡಬ್ಲೂ: 5 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 07-11-2024

ಹೆಸರು : ಸುಧಾಕರ್ ರೆಡ್ಡಿ

ತಂದೆ ಹೆಸರು : ಶರಣ ರೆಡ್ಡಿ

ವಯಸ್ಸು : 33 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಬಟಗೇರಾ ಕೆ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಪಂಚನಾಮೆಯಾಗಿದ್ದು ಆಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ದಾಖಲೆಯಲ್ಲಿರುವ ಮಾಹಿತಿಗಳು ನನಗೆ ಏನು ಗೊತ್ತಿಲ್ಲ. ನಾನು ಯಾವುದೇ ದಾಳಿಗೆ ಹೋಗಿಲ್ಲ. ನನ್ನ ಸಮಕ್ಷಮ ಯಾವುದೇ ಮು.ಮಾ. ವಶಪಡಿಸಿಕೊಂಡಿಲ್ಲ, ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ. 02-7-2014 ರಂದು ಆರೋಪಿತರು ಸಾರ್ವಜನಿಕರಿಗೆ ವಿತರಣೆ ಮಾಡುವ ಅಕ್ಕಿಯನ್ನು ಕಾಳು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಚಾ ಸಾ 1, 7, 8 ಜೊತೆ ನಾನು ಹಾಗೂ ಚಾ ಸಾ 4, 6 ಕೂಡಿಕೊಂಡು ಬೆಳಿಗ್ಗೆ 10-00 ಗಂಟೆಗೆ 1 ನೇ ಮತ್ತು 2 ನೇ ಆರೋಪಿತರ ಸಾರ್ವಜನಿಕ ನ್ಯಾಯ ಬೆಲೆ ವಿತರಣೆ ಅಂಗಡಿಗೆ ಹೋಗಿ ದಾಳಿ ಮಾಡಿ ನೋಡಲಾಗಿ ಅಂಗಡಿ ಮುಂದೆ ಒಂದು ವಾಹನ ಸಂಖ್ಯೆ ಎ ಪಿ 27 ಡಿ ಡಬ್ಲೂ 9637 ನೇದ್ದರಲ್ಲಿ ಆರೋಪಿತರು 50 ಕೆ ಜಿ ಅಕ್ಕಿಯ 148 ಚೀಲಗಳು, 50 ಕೆ ಜಿಯ ಗೋಧಿ 133 ಚೀಲಗಳನ್ನು ಬೇರೆಕಡೆಗೆ ಸಾಗಾಣಿಕೆ ಮಾಡುವ ಉದ್ದೇಶದಿಂದ ಲಾರಿಯಲ್ಲಿ ತಂಬಿರುತ್ತಾರೆ ಎಂದರೆ ಸರಿಯಿಲ್ಲ. ನಂತರ

ಅಂಗಡಿಯಲ್ಲಿ ಪರಿಶೀಲನೆ ಮಾಡಲಾಗಿ ಅಕ್ಕಿ 265 ಚೀಲಗಳು, ಗೋಧಿ 113 ಚೀಲಗಳು , ಸಕ್ಕರೆ 7 ಚೀಲಗಳು ಇದ್ದ ಬಗ್ಗೆ ಕಂಡು ಬಂದಿರುತ್ತದೆ ಎಂದರೆ ಸರಿಯಿಲ್ಲ. ಇಷ್ಟೋಂದು ಆಹಾರ ಧಾನ್ಯಗಳು ಎಲ್ಲಿಂದ ಬಂದಿರುವ ಬಗ್ಗೆ ಕಡತವನ್ನು ಕೇಳಿದಕ್ಕೆ ಆರೋಪಿತನು ನಮ್ಮ ತಂದೆಯವರಿಗೆ ಗೊತ್ತಿದೆ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಿಲ್ಲ. ವಾಹನದಲ್ಲಿರುವ ಧಾನ್ಯ ಅಂದಾಜು 6 ಲಕ್ಷ ರೂ. ಗಳ ಮೌಲ್ಯದ ಆಹಾರ ಧಾನ್ಯ ಇರುತ್ತದೆ ಎಂದರೆ ಸರಿಯಿಲ್ಲ. ತನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ ಸದರಿ ಧಾನ್ಯವನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎನ್ನುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ. ದಂ. ಸೇಡಂ.

ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ನಾನು ಯಾವುದೇ ರೀತಿಯ ಫಿರ್ಯಾದಿಯನ್ನು ನೀಡಿರುವುದಿಲ್ಲ.

ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಮುಂದು ವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶವನ್ನು ಕೋರಿದ್ದು , ಸಮಯ ನೀಡಿ ಮುಂದೂಡಲಾಯಿತು. )

(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು. )

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು , ಸಮಯ ನೀಡಿ ಮುಂದೂಡಲಾಯಿತು. )

Adoption cross examination

( ಆರೋಪಿ ಸಂಖ್ಯೆ 3 ಮತ್ತು 2 ಪರ ವಕೀಲರು ಆರೋಪಿ ಸಂಖ್ಯೆ 1, 4, 5 ಮತ್ತು 6 ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

(1ನೇ ಆರೋಪಿ ಪರ ವಕೀಲರು 2ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳಲು ನಿವೆದಿಸಿಕೊಂಡ ಮೇರೆಗೆ ಅನುಮೊದಿಸಲಾಯಿತು. )